ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2014–15 : ಮಾರ್ಚ್ 31, 2015

## ಹಿರಿಯ ಪತ್ರಕರ್ತ ಯಗಟಿ ಕೃಷ್ಣಮೂರ್ತಿ ಅವರ ನಿಧನಕ್ಕೆ ಮುಖ್ಯಮಂತ್ರಿ ಕಂಬನಿ

**ಬೆಂಗಳೂರು, ಮಾರ್ಚ್ 31 :**

*ಬಿಸಿನೆಸ್ ಸ್ಟ್ಯಾಂಡರ್ಡ್* ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಸೇವೆಸಲ್ಲಿದ್ದ ಹಿರಿಯ ಪತ್ರಕರ್ತ ಶ್ರೀ ಯಗಟಿ ಕೃಷ್ಣಮೂರ್ತಿ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಕಂಬನಿ ಮಿಡಿದಿದ್ದಾರೆ.

ಆರ್ಥಿಕ ವಿಚಾರಗಳ ಬಗ್ಗೆ ಅಧಿಕಾರವತ್ತಾಗಿ ಬರೆಯುತ್ತಿದ್ದ ಶ್ರೀ ಯಗಟಿ ಕೃಷ್ಣಮೂರ್ತಿ ಅವರು ಹಣಕಾಸು ಪತ್ರಿಕೋದ್ಯಮದಲ್ಲಿ ವಿಶೇಷ ಛಾಪು ಮೂಡಿಸಿದ್ದರು. ಶ್ರೀ ಯಗಟಿ ಕೃಷ್ಣಮೂರ್ತಿ ಅವರ ಅರ್ಥಗರ್ಭಿತ ಬಜೆಟ್ ವಿಶ್ಲೇಷಣೆಗಳು ಅರ್ಥಲೋಕದಲ್ಲಿಯೇ ಅರ್ಥಪೂರ್ಣವಾಗಿರುತ್ತಿದ್ದವು. ಸದಾ ಕಾಲ ಆರ್ಥಿಕ ವರ್ಷದ ಕೊನೆಯ ದಿನಕ್ಕೆ ಅತ್ಯಂತ ಮಹತ್ವ ನೀಡುತ್ತಿದ್ದ ಶ್ರೀ ಯಗಟಿ ಕೃಷ್ಣಮೂರ್ತಿ ಅವರು ಆರ್ಥಿಕ ವರ್ಷದ ಕೊನೆಯ ದಿನದಂದೇ ಇಹಲೋಕ ತ್ಯಜಿಸಿದ್ದು ಅಚ್ಚರಿಯನ್ನು ಉಂಟು ಮಾಡಿದೆ ಎಂದು ಶ್ರೀ ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಶ್ರೀ ಯಗಟಿ ಕೃಷ್ಣಮೂರ್ತಿ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

****************

ಡಿ ಪಿ ಎಂ